ಅಧ್ಯಕ್ಷರು.—''ಗೌರವನೀಯ ಇಸವಿಯ ಮಾರ್ಚ್ ೧೫ ರಂದು ವಿಧಾನಮಂಡಲದ ಸದಸ್ಯರನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆಯನ್ನು ಕೋರುತ್ತೇನೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

ಅಧ್ಯಕ್ಷರು.—ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

ಗಮನ ಸೆಳೆಯುವ ಸೂಚನೆಗಳು

(i) Government of India directions re-gfilling up of backlog Vacancies for SCs/STs.

SRI M. MALLIKARJUNA KHARGE.—I would like to call the attention of the Hon'ble Chief Minister to the situation arisen due to sudden stoppage of special recruitment drive for SC/ST as per the directions of Government of India for filling up the backlogs.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಇದು ಆನ್ವಯವಾಗುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನ್ವಯವಾಗುವುದಿಲ್ಲ ಎಂದು ಹೇಳಿದ್ದರೂ Home Secretary ಯವರು Indiscriminate recruitment ಮಾಡಬಾರದು ಎಂದು ಹೇಳಿ ಸರ್ಕ್ಯುಲರನ್ನು ಇಷ್ಯೂ ಮಾಡಿದ್ದಾರೆ. ಮುಂದೆ ಏನಾಗಿದೆ ಎಂದು ಹೇಳಿದರೆ ಕೆಲವು ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗಳು ಮತ್ತು ಕಾರ್ಪೊರೇಷನ್ಸ್‌ಗಳು ಕೂಡಾ ಈ ರೆಕ್ರೂಟ್‌ಮೆಂಟ್‌ನ್ನು ಮಾಡಿ ಅಪಾಯಿಂಟ್ ಮೆಂಟ್ಸ್‌ಗಳನ್ನು ಶುರು ಮಾಡತಕ್ಕಂಥ ಸ್ಟೇಜ್‌ನಲ್ಲಿ ಸ್ಟಾಪ್ ಮಾಡಿದ್ದಾರೆ, ಕೆಲವು ನೋಟೀಫಿಕೇಷನ್ಸ್ ಗಳನ್ನು ಇಷ್ಯೂ ಮಾಡಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ತಮ್ಮ ಅಪ್ಪಣೆ ಪಡೆದ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದಿನಾಂಕ. ೧೨-೭-೧೯೯೬ ಮತ್ತು ೨೨-೭-೧೯೯೬ರಲ್ಲಿ ಸರ್ಕಾರ ಆದೇಶಗಳನ್ನು ಹೊರಡಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿನ ಜನಾಂಗದವರಿಗೆ ೧೯೧೯೯೬ರಿಂದ ಸಿಗಬೇಕಾದ ರಿಕ್ತ ಸ್ಥಾನಗಳಲ್ಲಿ, ಅರ್ಹ ಅಭ್ಯರ್ಥಿಗಳು ಇಲ್ಲದೇ ತುಂಬಲಾಗದ ರಿಕ್ತ ಸ್ಥಾನಗಳನ್ನು ಗುರುತಿಸಿ ಅವುಗಳನ್ನು ''ಬ್ಯಾಕ್‌ಲಾಗ್'' ಎಂದು ಪರಿಗಣಿಸಿ ಒಂದು ವಿಶೇಷ ಪ್ರಯತ್ನ ಮಾಡಿ. ಈ ಬ್ಯಾಕ್‌ಲಾಗ್ ರಿಕ್ತ ಸ್ಥಾನಗಳನ್ನು ತುಂಬಲು ಸೂಚಿಸಲಾಗಿದೆ. ಇದರಂತೆ ನೇಮಕಾತಿ ಪ್ರಾಧಿಕಾರಗಳು ರಿಕ್ತ ಸ್ಥಾನಗಳನ್ನು ಗುರುತಿಸಿ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಮತ್ತು ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಆಯ್ಕೆ ಪ್ರಾಧಿಕಾರಕ್ಕೆ ಅವುಗಳನ್ನು ಬಿಡುಗಡೆ ಮಾಡಿರುತ್ತಾರೆ. ಇದರನ್ವಯ ಆಯ್ಕೆಯ ಕಾರ್ಯಕ್ರಮ ಪ್ರಗತಿಯಲ್ಲಿದೆ.

ವಿವಿಧ ಇಲಾಖೆಗಳಲ್ಲಿ ಅನುಸರಿಸುತ್ತಿರುವ ನೇಮಕಾತಿ ಪದ್ಧತಿಗಳ ಪುನರ್ ಪರಿಶೀಲನೆಯ ದೃಷ್ಟಿಯಿಂದ ಎಲ್ಲ ಇಲಾಖೆಗಳಲ್ಲಿಯೂ ನೇರ ನೇಮಕಾತಿಯನ್ನು ಸಧ್ಯಕ್ಕೆ ತಡೆ ಹಿಡಿಯಲಂ ಆದೇಶ ನೀಡಲಾಗಿದೆ. ಈ ತಡೆಯಾಜ್ಞೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಬ್ಯಾಕ್‌ಲಾಗ್ ರಿಕ್ತ ಸ್ಥಾನಗಳಿಗೆ ಮಾಡುವ ನೇವಕಾತಿಗೆ ಅನ್ವಯಿಸುವುದೇ ಎಂಬ ಬಗ್ಗೆ ಕೆಲವು ಇಲಾಖೆಗಳಿಂದ ಸ್ಪಷ್ಟೀಕರಣ ಕೋರಿ ಪ್ರಸ್ತಾವನೆಗಳು ಬಂದಿವೆ. ಈ ಬಗ್ಗೆ ಸೂಕ್ತ ಸ್ಪಷ್ಟೀಕರಣವನ್ನು ನೀಡಲಾಗುತ್ತಿದ್ದು ಬ್ಯಾಕ್‌ಲಾಗ್ ರಿಕ್ತ ಸ್ಥಾನಗಳನ್ನು ಭರ್ತಿ ಮಾಡಲು ತರ್ತು ಕ್ರಮಗಳನ್ನು ಕೈಗೊಳ್ಳಲಾಗುವುದು.

(ಉಪಾಧ್ಯಕ್ಷರು ಪೀಠವಲ್ಲಿದ್ದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗಾಗಲೇ ಚೀಫ್ ಸೆಕ್ರೆಟರಿಯವರಿಂದ ಒಂದು ಆದೇಶ ಹೋಗಿದೆ. ಕೆಲವು ಡಿಪಾರ್ಟ್‌ಮೆಂಟ್‌ಗಳಲ್ಲಿ ಕ್ಲಾರಿಫಿಕೇಷನ್ ಕೇಳಿದ ಮೇಲೆ ಇನ್‌ಡಿಸ್ಕ್ರಿಮಿನೇಟಾಗಿ

ರೆಕ್ರೂಟ್‌ಮೆಂಟ್ ಮಾಡಬಾರದು ಎಂದು ಹೇಳಿದ್ದಾರೆ. ಭಾರತ ಸರ್ಕಾರ ಏನಂ ಡೈರೆಕ್ಷನ್ ಕೊಟ್ಟಿತ್ತು ಮತ್ತು ರಾಜ್ಯಪಾಲರ ಆಡಳಿತದಲ್ಲಿ ರೆಕ್ರೂಟ್‌ಮೆಂಟ್ ಏನು ತೆಗೆದುಕೊಂಡಿದ್ದರು ಅದನ್ನು ಸದನ್ನಾಗಿ ನಿಲ್ಲಿಸಿದ್ದಾರೆ. ಜನರಲ್ ರೆಕ್ರೂಟ್‌ಮೆಂಟ್‌ನಲ್ಲಿ ಕ್ಲಬ್ ಮಾಡಿಕೊಂಡು ಒಮ್ಮೆಲೇ ಎರಡೂ ರೆಕ್ರೂಟ್‌ಮೆಂಟ್ ಮಾಡುತ್ತಾರೆ. ಆದ್ದರಿಂದ ತಕ್ಷಣ ಯಾರು ಯಾರು ಅಪಾಯಿಂಟ್‌ಮೆಂಟಾಗಿದೆ ಅವರಿಗೆ ತಕ್ಷಣ ಆರ್ಡರ್ ಇಷ್ಯೂ ಮಾಡಬೇಕು. ಯಾವ ಡಿಪಾರ್ಟ್‌ಮೆಂಟಿನಲ್ಲಿ ಅಡ್ಜಸ್ಟ್‌ಮೆಂಟ್ ಕೊಟ್ಟಿದ್ದಾರೆ ಅವರಿಗೆ ಇಂಟರ್‌ವ್ಯೂ ಕರೆದು ತಕ್ಷಣ ರೆಕ್ರೂಟ್ ಮಾಡುತ್ತೀರೋ ಹೇಗೆ? ಕೆಲವು ಕಡೆ ಏನು ಮಾಡಿದ್ದಾರೆಂದರೆ ರಿಸರ್ವ್ ಪೋಸ್ಟನ್ನು ಡೀ ರಿಸರ್ವ್ ಮಾಡಿ ಜನರಲ್ ಕ್ಯಾಂಡಿಡೇಟ್‌ಗೆ ಕೊಟ್ಟಿದ್ದಾರೆ. ಅಂಥ ಅಪಾಯಿಂಟ್‌ಮೆಂಟ್‌ಗಳನ್ನು ಕ್ಯಾನ್ಸಲ್ ಮಾಡುತ್ತೀರೋ ಹೇಗೆ?

ಶ್ರೀ ಕೆ. ಎಚ್. ರಂಗನಾಥ್.— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರ ಕಳವಳ ಏನಿದೆ ಅದಕ್ಕೆ ಕಾರಣ ಇಲ್ಲ. ಏಕೆಂದರೆ ಕನ್ನಡದಲ್ಲಿ ನಾನು ಹೇಳಿದ ಹೇಳಿಕೆ ಅವರಿಗೆ ಸರಿಯಾಗಿ ಅರ್ಥವಾಗಲಿಲ್ಲ ಎಂದು ಕಾಣುತ್ತದೆ ನನಗೂ ತಿಳಿಯದೇ ಇರತಕ್ಕ ಕನ್ನಡ ಈ ಸರ್ಕಾರಿ ಕನ್ನಡ.

ಶ್ರೀ ಎಂ. ಮಲ್ಲಿಕಾರ್ಜುನಪ್ಪಿರ್ಗೆ.— ನನಗೆ ಅರ್ಥವಾಗಿದೆ. ಈಗ ನಿಲ್ಲಿಸಿದ್ದಾರೆ. ಡೈರೆಕ್ಷನ್ ಕೊಟ್ಟು ಡಿಪಾರ್ಟ್‌ಮೆಂಟಲ್ ನೋಟ್ ಹೋಗಿದೆ. ಸ್ವಲ್ಪ ನಿಲ್ಲಿಸಿ, ಆ ಮೇಲೆ ನೋಡೋಣ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.— ಬ್ಯಾಕ್‌ಲಾಗ್ ನೇಮಕಾತಿ ಏನು ನಡೆಯುತ್ತಿದೆ ಅದಕ್ಕೆ ತಡೆ ಕೊಟ್ಟಿದ್ದುದು ಇಲ್ಲಿ ಅನ್ವಯಿಸುವುದಿಲ್ಲ. ಅದು ಮುಂದುವರೆಯುತ್ತದೆ. ಅದಕ್ಕಾಗಿ suitable clarification in this behalf is being issued and expeditious action will be taken to fill up the backlog vacancies ಆದ್ದರಿಂದ ಕಳವಳ ಇಲ್ಲ ಎಂದು ಹೇಳಿದ್ದೇನೆ. ಮತ್ತೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಡೀ ರಿಸರ್ವ್ ಮಾಡಿದ್ದಾರೆಂದು ಅದರ ಬಗ್ಗೆ ಸರ್ಕಾರದ ನಿಲುವು ಏನು ಎಂದು ಕೇಳಿದ್ದಾರೆ. ಮಾನ್ಯ ಸದಸ್ಯರ ಬಳಿ ಅಂಥ ನಿದರ್ಶನಗಳಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಅದರ ಬಗ್ಗೆ ವಿಚಾರಣೆ ಮಾಡಲಾಗುವುದು. Instructions are being issued to fill up the backlog vacancies.

ಶ್ರೀ ಕೆ. ಎಚ್. ಪಾಟೀಲ್.— ಕಾಲಿಂಗ್ ಅಟೆನ್‌ಷನ್ ಯಾರು ಕೊಟ್ಟಿದ್ದಾರೋ. ಅವರಿಗೆ ಉತ್ತರದ ಕಾಪಿ ಕೊಡಬೇಕು ನಿಯಮದ ಪ್ರಕಾರ ನಮಗೆ ಕೊಡಬೇಕು. ನಮಗೆ ಕಾಪಿ ಬರುತ್ತಿಲ್ಲ. ನಮಗೆ ಕಾಪಿ ಕೊಡದಿದ್ದರೆ ಹೇಗೆ ಗೊತ್ತಾಗುತ್ತದೆ? ಪ್ರಶ್ನೆ ಕೇಳುವುದು ಹೇಗೆ? How can we ask clarification on such an important question without a copy of the Statement? How can we know about it? I am one of the signatories. ಉತ್ತರ ಏನೆಂಬುದು ನನಗೆ ಗೊತ್ತಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.— ನಮ್ಮ ಆಫೀಸಿನಿಂದ ಕಾಪಿ ಕಳುಹಿಸುವುದಿಲ್ಲ. I am really sorry for this it is a small lapse. I am sorry for this small lapse.

MADAM DEPUTY SPEAKER.— If you have got any copies, you can send it over to them.

ಶ್ರೀ ಕೆ. ಹೆಚ್. ಪಾಟೀಲ್.— ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದರು ಅಂದರೆ ನೇರ ನೇಮಕಾತಿಯ ಸರ್ಕ್ಯುಲರ್ ಏನಿದೆ that is not applicable to SC people. ಆದರೆ ಇದರಲ್ಲಿ ಅದನ್ನು ಹೇಳಿಲ್ಲ. ಯಾರು ಬರೆಯುತ್ತಾರೆ ಆ ಮನುಷ್ಯ ಪೆಡ್ಯೂಲ್ ಕ್ಯಾಸ್ಟ್‌ನವರಿಗೆ ವಿರೋಧವಾಗಿದ್ದಾನೆಯೇ ಅಥವಾ ಅನುಕೂಲವಾಗಿದ್ದಾನೆಯೇ ಅಥವಾ ಸರ್ಕಾರಕ್ಕೆ ಓಬಿಡಿಯಂಟ್, ಅಥವಾ ಡಿಸ್‌ಓಬಿಡಿಯಂಟ್ ಆಗಿದ್ದಾನೋ ಎಂಬುದನ್ನು ತಾವು ನೋಡಬೇಕು. ಮುಖ್ಯಮಂತ್ರಿಗಳ ಹೇಳಿಕೆಗೂ ಈ ಹೇಳಿಕೆಗೂ ವಿರೋಧವಾದರೆ ಹೇಗೆ?

ಶ್ರೀ ಕೆ. ಹೆಚ್. ರಂಗನಾಥ್.— ಬ್ಯಾಕ್‌ಲಾಗ್ ಏನಿದೆ ಹಿಂದಿನಿಂದ ಉಳಿದುಕೊಂಡು ಬಂದಿರುವುದು ಏನಿದೆ ಅದಕ್ಕೆ ನೇಮಕಾತಿ ಮಾಡಬೇಕೆಂದು ಒಳಗಿಂದ ಹೇಳಿಕೊಂಡು ಬಂದಿದ್ದು ಈಗ ಅದನ್ನು ನೇಮಕ ಮಾಡಬೇಕೆಂದು ಸರ್ಕಾರ ತೀರ್ಮಾನ ಕೈಗೊಂಡಿದೆ ಈಗ ನೇರವಾಗಿ ಉದ್ಭವವಾಗತಕ್ಕ ವೇಕೆನ್ಸಿಗಳಿಗೆ ಏನು ತುಂಬಬಾರದೆಂದು ತಡೆ ಕೊಟ್ಟಿದ್ದಾರೆ. ಅದು ಇದಕ್ಕೆ ಅನ್ವಯಿಸುವುದಿಲ್ಲ. ಅದನ್ನು ಸ್ಪಷ್ಟ ಮಾಡದೇ ಇದ್ದುದರಿಂದ ಈ ಒಂದು ಪರಿಸ್ಥಿತಿ ಬಂದಿದೆ. ಈಗ ಕ್ಲಾರಿಫಿಕೇಷನ್

ಕೊಟ್ಟಿದ್ದೇವೆ. Instructions are being issued to fill up the backlog vacancies.

SRI S. PARAMESWAR.— Orders are being issued to fill up the backlog vacancies. ಎಂದು ಮಾನ್ಯ ಸಚಿವರು ಹೇಳಿದರು. ಎಷ್ಟು ದಿವಸದೊಳಗೆ ಈ ಬ್ಯಾಕ್‌ಲಾಗ್ ವೇಕೆನ್ಸಿಗಳನ್ನು ಫಿಲ್‌ಅಪ್ ಮಾಡಲು ಆದೇಶ ಕೊಟ್ಟಿದ್ದೀರಿ? ಹಿಂದೆಯೂ ಸಹ ಬ್ಯಾಕ್‌ಲಾಗ್ ವೇಕೆನ್ಸಿಗಳನ್ನು ಫಿಲ್‌ಅಪ್ ಮಾಡಬೇಕೆಂದು ಆದೇಶ ಕೊಟ್ಟಿದ್ದರು. ಆದರೆ ಅದನ್ನು ಮಾಡಲಿಲ್ಲ. Is there any time-frame for this?

SRI K. H. RANGANATH.— It is in progress.

ಡಾ. ಎಸ್. ಪರಮೇಶ್ವರ್.—ಬಪಳಪ್ಪು ಕಡೆ ಯುನಿವರ್ಸಿಟಿ ಗ್ರ್ಯಾಂಟ್ ಕಮಿಷನ್ ಆದೇಶದ ಪ್ರಕಾರ ಕೆಲವು ಕೇಡರ್‌ಗಳನ್ನು ಅಬಾಲಿಷ್ ಮಾಡಿದ್ದಾರೆ. ಆ ಪರ್ಟಿಕ್ಯುಲರ್ ಕೇಡರ್‌ನಲ್ಲಿ ವೇಕೆನ್ಸಿ ಉಳಿದಿದ್ದು, ಈಗ ಕೇಡರ್ ಅಬಾಲಿಷ್ ಆಗಿರುವುದರಿಂದ ಆ ವೇಕೆನ್ಸಿಗಳನ್ನು ಕ್ಯಾರಿ ಓವರ್ ಮಾಡಿ, ಮತ್ತೆ ಬ್ಯಾಕ್‌ಲಾಗ್ ಅವನ್ನು ಕನ್ಸಿಡರ್ ಮಾಡುತ್ತೀರಾ? ಅಥವಾ ಕೇಡರ್ ಅಬಾಲಿಷ್ ಮಾಡಿರುವುದರಿಂದ ಆ ಪೋಸ್ಟ್ ಅಬಾಲಿಷ್ ಆಗಿದೆ ಎಂದು ಹೇಳುತ್ತೀರಾ? ಜೊತೆಗೆ ಶೇಕಡ ೧೮ ಅಥವಾ ೨೫ ಪರ್ಸೆಂಟ್ ಫಿಲ್‌ಅಪ್ ಆಗುವವರೆಗೆ ಮಾಡುತ್ತೀರಾ? ಏನಾದರೂ ಒಂದು ಟೈಂ ಫ್ರೇಮ್ ಇರಬೇಕು ಅಲ್ಲವೇ?

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಸದಸ್ಯರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಹಾಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಇದು ಸರ್ಕಾರಿ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯ. I want notice for this.

ಡಾ. ಎಸ್. ಪರಮೇಶ್ವರ್.— ವಿಶ್ವವಿದ್ಯಾನಿಲಯಗಳು ಆಟಾನಮಸ್ ಬಾಡಿಗಳಾದರೂ ಸಹ ವೇಕೆನ್ಸಿಗಳನ್ನು ಫಿಲ್ ಅಪ್ ಮಾಡಬೇಡಿಯೆಂದು ಸರ್ಕಾರದವರು ಆದೇಶ ಕೊಟ್ಟಿದ್ದಾರೆ. ಆದರ ಸಲುವಾಗಿಯೇ ನಾನು ಈ ಒಂದು ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.— ಸರ್ಕಾರದವರು ಇಲ್ಲಿಯತನಕ ಸೂಕ್ತ ಸ್ಪಷ್ಟೀಕರಣವನ್ನು ಇದರ ಬಗ್ಗೆ ಕೊಟ್ಟಿಲ್ಲ. ನೀವು ಕೊಟ್ಟಿದ್ದರೆ, ಈ ಹೇಳಿಕೆಯನ್ನು ಮಾಡಲು ನಿಮಗೆ ಅಧಿಕಾರಿಗಳು ತಪ್ಪು ಮಾಹಿತಿ ಒದಗಿಸಿದ್ದಾರೆಂದು ಹೇಳಬೇಕಾಗಿದೆ. ನೀವು ಒಂದು ಹೇಳುತ್ತೀರಿ. ಚೀಫ್ ಮಿನಿಸ್ಟರ್ ಒಂದು ಹೇಳುತ್ತಾರೆ, ಹಾಗೂ ಅಧಿಕಾರಿಗಳು ಒಂದು ಹೇಳುತ್ತಾರೆ. ಈ ಮೂರರ ನಡುವೆ ನಾವೆಲ್ಲರೂ ಹರಿಜನ-ಗಿರಿಜನರ ಕಲ್ಯಾಣ ಮಾಡಬೇಕೆಂದು ಇದ್ದರೂ ಕೂಡ ಅದು ಆಗದೇ ಇರತಕ್ಕ ಪರಿಸ್ಥಿತಿ ಉಂಟಾಗಿದೆ. ಅದನ್ನು ತಪ್ಪಿಸಲು ಏನು ಮಾಡುತ್ತೀರಿ.

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸ್ಪಷ್ಟೀಕರಣ ಕೊಟ್ಟಾಯ್ತು. ಈ ಬ್ಯಾಕ್‌ಲಾಗ್ ಏನು ಭರ್ತಿ ಆಗತಕ್ಕಂಥಾದ್ದು ಇದೆ ಅದಕ್ಕೆ ಇದು ಅನ್ವಯವಾಗುವುದಿಲ್ಲ ಎನ್ನತಕ್ಕಂಥ ಸ್ಪಷ್ಟೀಕರಣ ಸರ್ಕಾರದಿಂದ ಹೋಗಿರುತ್ತದೆ. ಈ ಕಳವಳಕ್ಕೆ ದಾರಿ ಇಲ್ಲ ಎಂದು. ಅದಕ್ಕೇ ನಾನು ಪ್ರಸ್ತಾಪ ಮಾಡಿದ್ದುದು.

(ii) ತುಂಗಾ ಮೇಲ್ದಂಡೆ (ಮಾಲತಿ ಹೊರತುಪಡಿಸಿ) ಗಾಜನೂರು ನೀರಾವರಿ ಯೋಜನೆಯಿಂದ ಚಿಕ್ಕಮಗಳೂರು ಜಿಲ್ಲೆಯ ಅಡಿಕೆ ತೋಟಗಳು ಮುಳುಗಡೆಯಾಗಿ ಹಾನಿಯಾಗುವುದರ ಬಗ್ಗೆ

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಉಪಾಧ್ಯಕ್ಷರೆ, ತುಂಗಾ ಮೇಲ್ದಂಡೆ (ಮಾಲತಿ ಹೊರತುಪಡಿಸಿ) ಗಾಜನೂರು ನೀರಾವರಿ ಯೋಜನೆಯಿಂದ ಚಿಕ್ಕಮಗಳೂರು ಜಿಲ್ಲೆಯ ಅಡಿಕೆ ತೋಟಗಳು ಮುಳುಗಡೆಯಾಗಿ ಹಾನಿಯಾಗುವುದರ ಬಗ್ಗೆ ಮಾನ್ಯ ಲೋಕೋಪಯೋಗಿ, ನೀರಾವರಿ ಹಾಗೂ ಇಂಧನ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು):— ಮಾನ್ಯ ಉಪಾಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಲೋಕೋಪಯೋಗಿ ಸಚಿವರ ಪರವಾಗಿ ಈ ಕೆಳಗಿನ ಹೇಳಿಕೆಯನ್ನು ಸಭೆಯ ಮುಂದೆ ಮಂಡಿಸಲು ಇಷ್ಟಪಡುತ್ತಾ ಇದ್ದೇನೆ.